# ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತ

(ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿದೆ)

ಅಧೀಕ್ಷಕ ಅಭಿಯಂತರರು(ವಿ)
ಕಾ ಮತ್ತು ಪಾ ವೃತ್ತ, ಕೇಶ್ವಾಪೂರ, ಹುಬ್ಬಳ್ಳಿ-23
Tel: 0836-2364144, Fax: 0836-2366184

**Superintending Engineer(Ele)**
**O & M Circle, Keshwapur, Hubballi-23**
**E-mail ID: seehbl.hescom@gmail.com**

**Corporate Identity Number** (CIN) : U31401KA2002SGC030437


## ಗ್ರಾಹಕರ ಕುಂದುಕೊರತೆಗಳ ನಿವಾರಣೆ ವೇದಿಕೆ

ಕಾರ್ಯ ಮತ್ತು ಪಾಲನೆ ವೃತ್ತ, ಹೆಸ್ಕಾಂ, ಹುಬ್ಬಳ್ಳಿ, ಧಾರವಾಡ ಜಿಲ್ಲೆ

ಪ್ರಕರಣ ಸಂಖ್ಯೆ:252/2020

ವೇದಿಕೆಯ ಸದಸ್ಯರು:

ಶ್ರೀ **ಎಮ್. ಆರ್. ಶಾನಭಾಗ,** ಅಧೀಕ್ಷಕ ಇಂಜಿನೀಯರ(ವಿ) ಕಾ ಮತ್ತು ಪಾ ವೃತ್ತ ಹೆಸ್ಕಾಂ ಹುಬ್ಬಳ್ಳಿ ಹಾಗೂ ವೇದಿಕೆಯ ಅಧ್ಯಕ್ಷರು.

ಶ್ರೀ **ರಾಮಪ್ಪ. ಎನ್. ಎನ್,** ಉಪಲೆಕ್ಕ ನಿಯಂತ್ರಣಾಧಿಕಾರಿ ಕಾ ಮತ್ತು ಪಾ ವೃತ್ತ, ಹೆಸ್ಕಾಂ, ಹುಬ್ಬಳ್ಳಿ ಹಾಗೂ ವೇದಿಕೆಯ ಸದಸ್ಯರು.

ಶ್ರೀಮತಿ, **ಲೀಲಾ ಆರ್ ಹಿರೇಮಠ,** ವಕೀಲರು, ಆಯೋಗದಿಂದ ನಿಯೋಜಿಸಲಾದ ಸದಸ್ಯರು **Leave of absence**.

**ಶ್ರೀ ರಮೇಶ ಎಲ್ ಈರಕಲ್,**
(R R No :KTL-10918)
AC.ID:4544032091
C/o ಶ್ರೀ ತುಷಾರ ಎಂ ಬದ್ದಿ,
ಅರಿಹಂತ ಪಾರ್ಕ, ಕೇಶ್ವಾಪೂರ,
ಹುಬ್ಬಳ್ಳಿ. ..............ದೂರುದಾರರು.

**ವಿರುದ್ಧ,**

ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ(ವಿ)
ಕಾ ಮತ್ತು ಪಾ ಶಹರ ಉಪವಿಭಾಗ-1,
ಹೆಸ್ಕಾಂ, ಹುಬ್ಬಳ್ಳಿ. ..................ಪ್ರತಿವಾದಿಗಳು.

**ಪೀಠಿಕೆ:**

1. ಶ್ರೀ ರಮೇಶ ಎಲ್ ಇರಕಲ್, ಇವರ ಸ್ಥಾವರ ಸಂಖ್ಯೆ: KTL10918 ನೇದ್ದ ಸ್ಥಾವರವು 2 ಕಿಲೋ ವ್ಯಾಟ್ ವಿದ್ಯುತ್ ಮಂಜೂರಾತಿಯೊಂದಿಗೆ ಎಲ್.ಟಿ-7ಎ ಜಕಾತಿಯಡಿಯಲ್ಲಿ ದಿನಾಂಕ:07-03-2017 ರಂದು ಸಂಪರ್ಕಿತಗೊಂಡಿರುತ್ತದೆ. ಸದರಿ ಸ್ಥಾವರಕ್ಕೆ ಮುಂಗಡ ಬಳಕೆ ಶುಲ್ಕ(ಎ.ಸಿ.ಸಿ) ಮೊತ್ತ ರೂ. 6770/-ಗಳನ್ನು ಪಾವತಿಸಿದ್ದಿರುತ್ತದೆ. ಸ್ಥಾವರವನ್ನು ದಿನಾಂಕ:27-02-2019 ರಂದು ವಿದ್ಯುತ್ ಸ್ಥಾವರವನ್ನು ಡಿಸ್‌ಮೆಂಟಲ್ ಮಾಡಲಾಗಿದ್ದಿದ್ದು, ಸ್ಥಾವರದ ಮುಂಗಡ ಬಳಕೆ ಶುಲ್ಕ(ಎ.ಸಿ.ಸಿ) ಮೊತ್ತ ರೂ. 6425.43/-ಗಳನ್ನು ಹಿಂಪಾವತಿಸುವಂತೆ ದಿನಾಂಕ:26-03-2019 ರಂದು ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ(ವಿ), ಕಾ ಮತ್ತು ಪಾ ಶಹರ ಉಪ ವಿಭಾಗ-1, ಹೆಸ್ಕಾಂ, ಹುಬ್ಬಳ್ಳಿರವರಿಗೆ ಅರ್ಜಿ ಸಲ್ಲಿಸಿದ್ದು, ಕಾರ್ಯನಿರ್ವಾಹಕ ಇಂಜಿನೀಯರ(ವಿ) ಕಾ ಮತ್ತು ಪಾ ನಗರ ವಿಭಾಗ, ಹೆಸ್ಕಾಂ, ಹುಬ್ಬಳ್ಳಿರವರ ಪತ್ರ ಸಂಖ್ಯೆ:1004-06 ದಿನಾಂಕ:29-04-2019 ರಲ್ಲಿ ಮೊತ್ತ ರೂ. 5235/-ಗಳನ್ನು ಹಿಂಪಾವತಿಸಿದ್ದಿರುತ್ತದೆ. ಆದರೆ ಉಳಿದ ವ್ಯಾತ್ಯಾಸದ ಮೊತ್ತ ಪಾವತಿ ಮಾಡಲು ವಿಳಂಬವಾದ ದಿನಗಳಿಗೆ KERC Conditions of Supply ಅನುಛೇದ 29.08 ರ ಅನ್ವಯ ದಿನಾಂಕ:12-03-2019 ರಿಂದ ಬ್ಯಾಂಕ್ ಬಡ್ಡಿದರದಲ್ಲಿ ಬಡ್ಡಿಯನ್ನು ಪಾವತಿಸಿಕೊಡುವಂತೆ ಗ್ರಾಹಕರ ಪರವಾಗಿ ಶ್ರೀ ತುಷಾರ ಎಂ ಬದ್ದಿರವರು ದಿನಾಂಕ:12-05-2020 ರಂದು ಗ್ರಾಹಕರ ಕುಂದು ಕೊರತೆ ನಿವಾರಣಾ ವೇದಿಕಗೆ ದೂರು ಸಲ್ಲಿಸಿರುತ್ತಾರೆ.

.....2

2. ಶ್ರೀ ರಮೇಶ ಎಲ್ ಇರಕಲ್, ಇವರ ಸ್ಥಾವರ ಸಂಖ್ಯೆ: KTL10918 ನೇದ್ದ ಸ್ಥಾವರಕ್ಕೆ ರೂ. 6770/- ಮುಂಗಡ ಬಳಕೆ ಶುಲ್ಕ(ಎಸಿಸಿ) ಭರಿಸಿಕೊಂಡು 2 ಕಿಲೋ ವ್ಯಾಟ್ ವಿದ್ಯುತ್ ಮಂಜೂರಾತಿಯೊಂದಿಗೆ ಎಲ್.ಟಿ-7ಎ ಜಕಾತಿಯಡಿಯಲ್ಲಿ ದಿನಾಂಕ:07-03-2017 ರಂದು ಸಂಪರ್ಕಿತಗೊಂಡಿರುತ್ತದೆ. ಸದರಿ ಸ್ಥಾವರನ್ನು ದಿ:27-02-2019 ರಂದು ಗ್ರಾಹಕರ ಕೋರಿಕೆ ಮೇರೆಗೆ ಅವರ ಸ್ಥಾವರದ ವಿದ್ಯುತ್ ನಿಲುಗಡೆಗೊಳಿಸಿ, ಡಿಸ್‌ಮೆಂಟಲ್ ಮಾಡಲಾಗಿದ್ದಿರುತ್ತದೆ. ಗ್ರಾಹಕರು ಎಸಿಸಿ ಮೊತ್ತ ಹಿಂದಿರುಗಿಸಲು ಸಲ್ಲಿಸಿದ ಅರ್ಜಿಯನುಸಾರ ಮೆ:ಸುಪರ್ ಮ್ಯಾಕ್ಸ ಪ್ರೈವೇಟ್ ನಿಯಮಿತ, ಬೆಂಗಳೂರು ಇವರು ನೀಡಿದ ಗ್ರಾಹಕರ ಖಾತೆಯ ವಿವರವನ್ನು ಪರಿಶೀಲಿಸಿ, ಮುಂಗಡ ಬಳಕೆ ಶುಲ್ಕ ರೂ. 6770/-ರಲ್ಲಿ ಗ್ರಾಹಕರಿಂದ ಬಾಕಿ ಇದ್ದ ರೂ. 1535/-ಗಳನ್ನು ಕಡಿತಗೊಳಿಸಿ ರೂ. 5235/-ನ್ನು ವಿಭಾಗೀಯ ಕಚೇರಿಯಿಂದ ದಿನಾಂಕ:29-07-2019 ರಲ್ಲಿ ಗ್ರಾಹಕರಿಗೆ ಚೆಕ್ ಮೂಲಕ ಹಿಂಪಾವತಿಸಲಾಗಿದ್ದಿರುತ್ತದೆ. M/s Supermax Supermax ರವರ Closing report ನಲ್ಲಿ Discounted units:100 ಹಾಗೂ ಇದರ ಮೊತ್ತ 1081.50 ಎಂದು ತೋರಿಸಿರುವುದನ್ನು ಹೆಚ್ಚುವರಿ ಕರೆನ್ಸಿ ಎಂದು ಭಾವಿಸಿ, ಈ ಹೆಚ್ಚುವರಿ ಕರೆನ್ಸಿ ಮೊತ್ತ ರೂಪಾಯಿ 1190.43 ಅನ್ನು ಹಿಂದಿರುಗಿಸಲು ಕೋರಿರಬಹುದಾಗಿರುತ್ತದೆ. ಆದರೆ, ಇದರಲ್ಲಿ ಯಾವೊಂದು ಹೆಚ್ಚುವರಿ ಕರೆನ್ಸಿ ಮೊತ್ತವೆಂದು ಪರಿಗಣಿಸಿ ಹಿಂದಿರುಗಿಸಲು ನಿಯಮಾನುಸಾರ ಬರುವುದಿಲ್ಲವೆಂದು ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ(ವಿ) ಕಾ ಮತ್ತು ಪಾ ಶಹರ ಉಪ ವಿಭಾಗ-1, ಹೆಸ್ಕಾಂ, ಹುಬ್ಬಳ್ಳಿರವರು ಪತ್ರ ಸಂಖ್ಯೆ:5256-57 ದಿನಾಂಕ: 21-09-2020 ರ ಪತ್ರದಲ್ಲಿ ವೇದಿಕೆಗೆ ವಿನಂತಿಸಿಕೊಂಡಿರುತ್ತಾರೆ.
3. ಸದರ ಪ್ರಕರಣವನ್ನು ದಿನಾಂಕ:25-09-2020 ರಂದು ವಿಚಾರಣೆಯನ್ನು ನಡೆಸಲಾಯಿತು. ಆಗ ಈ ಕೆಳಗಿನವರು ಹಾಜರಿದ್ದರು.

| | |
|---|---|
| ಗ್ರಾಹಕರ ಪ್ರತಿನಿಧಿ | ನಿಗಮದ ಪರವಾಗಿ |
| ಶ್ರೀ ತುಷಾರ ಎಂ ಬದ್ದಿ | ಶ್ರೀ ಅಂಜನಪ್ಪ ಬಿ |
| | ಕಾ ಮತು ಪಾ ಶಹರ ಉಪವಿಭಾಗ-1, ಹುಬಳ್ಳಿ. |

**<u>ಗ್ರಾಹಕರ ಪರವಾಗಿ ಶ್ರೀ ತುಷಾರ ಎಂ ಬದ್ದಿ, ಇವರ (ಎ) ಫಾರ್ಮನೋದಿಗೆ ಸಲ್ಲಿಸಿದ ಲಿಖಿತ ಹೇಳಿಕೆ ಈ ಕೆಳಗಿನಂತಿರುತ್ತದೆ:</u>**

## STATEMENT OF OBJECTIONS

filed by Shri Ramesh L Irkal through his Authorised Representative Shri Tushar M Baddi R/o HUBBALLI

***

## BRIEF FACTS

1. It is learnt that the installation bearing RR No KTL 10918 is serviced on 04.03.2017 with a sanctioned load of 2 KW through a single phase prepaid meter, where the amount was paid as under:
   a. Advance Consumption Charges : Rs. 6770/-
   b. Prepaid Currency Charges : Rs. Nil
   c. Supervision Charges : Rs. 50/-
2. It is further learnt that on returning the prepaid meter the prepaid agency has generated the Final Bill (Contract Closing & Settlement) receipt, after working out all the adjustments wherein the final refundable amount is shown as 6425.43
3. On 26.03.2019 the complainant herein has forwarded a refund application in duplicate duly enclosing the original receipt pertaining to Advance Consumption Charges and the Final Bill (Contract Closing & Settlement) Receipt as marked herein as **Annexure "A"**

....3

4. On 29.04.2019 the Executive Engineer (Ele.) Urban Division, HESCOM Hubballi vide their OM No UDH/EE(E)/AO/AAO/SA(R) /F6/2019-20/1004-1006 as marked as **Annexure "B"** has refunded only the Advance Consumption Charges of Rs 5235/- to the consumer and not the Excess Currency Charges (Revenue Charges) held with the licensee, which is opposed to law.

5. On verifying the records and on enquiry it is learnt that the (Contract Closing & Settlement) Receipt issued at the prepaid counter is showing the net refundable amount to the consumer is Rs 6425.43 whereas the amount approved for refund to the consumer is Rs 5235.00.

6. In view of the above it seems that the licensee is enjoying the Excess Currency Charges (Revenue Charges) paid by the consumer which also leads to *unjust enrichment*. The licensee is duty bound to refund the excess amount held with this Authority and accordingly the consumer is also bound to receive the same in accordance with law.

7. The complainant also wishes to bring to notice of this Authority that this issue is brought to the notice of the concerned licensee as well as the Executive Engineer (Ele.) O&M Urban Division, HESCOM Hubballi through Vidyuth Grahakara Hitharakshana Vedike (R.) Karnataka State, Huballi through their letter no. 199/19 dated 15.05.2019 as marked as **Annexure "C"** but there is no response from the aforesaid Authority till this date.

In view of the aforesaid para it is hereby requested to kindly intervene in this matter and direct the licensee to refund the excess currency charges as it is also learnt that this issue is not only to this particular installation but the same is generalized to all other installations connected through prepaid meter.

**ನಿಗಮದ ಪರವಾಗಿ ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ್(ವಿ) ಕಾ ಮತ್ತು ಪಾ ಶಹರ ಉಪವಿಭಾಗ-1, ಹೆಸ್ಕಾಂ, ಹುಬ್ಬಳ್ಳಿರವರು ಪತ್ರ ಸಂಖ್ಯೆ:5256-57 ದಿನಾಂಕ:21-09-2020 ರ ಪತ್ರದೊಂದಿಗೆ ಸಲ್ಲಿಸಿರುವ ಹೇಳಿಕೆಯನ್ನು ಲಿಖಿತ ಹೇಳಿಕೆಯನ್ನಾಗಿ ಪರಿಗಣಿಸುವಂತೆ ವಿನಂತಿಸಿಕೊಂಡಿರುತ್ತಾರೆ ಸಾರಾಂಶ ಕೆಳಗಿನಂತಿರುತ್ತದೆ.**

ಶ್ರೀ ರಮೇಶ ಎಲ್ ಇರಕಲ್‌ರವರ ಸ್ಥಾವರ ಸಂಖ್ಯೆ:KTL10918 ರ ದೂರಿಗೆ ಸಂಬಂಧಿಸಿದಂತೆ ಈ ಕೆಳಗಿನ ಅಂಶಗಳನ್ನು ಸಲ್ಲಿಸಲಾಗಿದೆ.

1. ಶ್ರೀ ರಮೇಶ ಎಲ್ ಇರಕಲ್‌ರವರು ತಾತ್ಕಾಲಿಕ ವಿದ್ಯುತ್ ಸ್ಥಾವರ ಸಂಖ್ಯೆ: KTL10918, 2 ಕಿ.ವ್ಯಾ, ಎಲ್.ಟಿ-7ಎ ಜಕಾತಿಯಲ್ಲಿ ವಿದ್ಯುತ್ ಮಂಜೂರಾತಿ ಪಡೆದಿದ್ದು, ದಿ:07-03-2017 ರಂದು ವಿದ್ಯುತ್ ಸಂಪರ್ಕ ಕಲ್ಪಿಸಲಾಗಿರುತ್ತದೆ.
2. ಸದರಿ ಗ್ರಾಹಕರು ತಾತ್ಕಾಲಿಕ ವಿದ್ಯುತ್ ಸಂಪರ್ಕ ಪಡೆಯುವುದಕ್ಕೆ ರೂ. 6770/- ಮುಂಗಡ ಬಳಕೆ ಶುಲ್ಕ(ಎಸಿಸಿ) ಭರಿಸಿರುತ್ತಾರೆ.
3. ಶ್ರೀ ರಮೇಶ ಎಲ್ ಇರಕಲ್‌ರವರ ಸ್ಥಾವರದ ರೆಗ್ಯುಲರ ಮಾಪಕದಿಂದ ಪ್ರೀಪೇಡ್ ಸ್ಮಾರ್ಟ ಮಾಪಕಕ್ಕೆ ದಿನಾಂಕ:03-07-2017 ರಂದು ಬದಲಾಯಿಸಲಾಗಿರುತ್ತದೆ.

....4

4. ದಿ:27-02-2019 ರಂದು ಗ್ರಾಹಕರ ಕೋರಿಕೆ ಮೇರೆಗೆ ಅವರ ಸ್ಥಾವರದ ವಿದ್ಯುತ್ ನಿಲುಗಡೆಗೊಳಿಸಿ, ಡಿಸ್‌ಮೆಂಟಲ್ ಮಾಡಲಾಯಿತು.
5. ಗ್ರಾಹಕರು ಎಸಿಸಿ ಮೊತ್ತ ಹಿಂದಿರುಗಿಸಲು ಸಲ್ಲಿಸಿದ ಅರ್ಜಿಯನುಸಾರ ಮೆ:ಸುಪರ್ ಮ್ಯಾಕ್ಸ ಪ್ರೈವೇಟ್ ನಿಯಮಿತ, ಬೆಂಗಳೂರು ಇವರು ನೀಡಿದ ಗ್ರಾಹಕರ ಖಾತೆಯ ವಿವರವನ್ನು ಪರಿಶೀಲಿಸಿ, ಮುಂಗಡ ಬಳಕೆ ಶುಲ್ಕ ರೂ. 6770/-ರಲ್ಲಿ ಗ್ರಾಹಕರಿಂದ ಬಾಕಿ ಇದ್ದ ರೂ. 1535/-ಗಳನ್ನು ಕಡಿತಗೊಳಿಸಿ ರೂ. 5235/-ನ್ನು ಹಿಂದಿರುಗಿಸಲು ವಿಭಾಗೀಯ ಕಚೇರಿಗೆ ಪ್ರಸ್ತಾವನೆ ಸಲ್ಲಿಸಲಾಯಿತು.
6. ಮುಂಗಡ ಬಳಕೆ ಶುಲ್ಕ ಹಿಂದಿರುಗಿಸಲು ಈ ಕಚೇರಿಯಿಂದ ಸಲ್ಲಿಸಿದ ಪ್ರಸ್ತಾವನೆಯಂತೆ, ವಿಭಾಗೀಯ ಕಚೇರಿಯಿಂದ ಗ್ರಾಹಕರಿಗೆ ರೂ. 5235/-ಗಳ ಚೆಕ್‌ನ್ನು ವಿತರಿಸಲಾಗಿದೆ.
7. ಗ್ರಾಹಕರ ಪರ ಮನವಿದಾರರಿಗೆ ಮುಂಗಡ ಬಳಕೆ ಶುಲ್ಕ ಹಿಂದಿರುಗಿಸಿದ ವಿವರಣೆಯನ್ನು ಮೌಖಿಕವಾಗಿ ಈ ಕಚೇರಿಯ ವಿಷಯ ನಿರ್ವಾಹಕರು ವಿವರಿಸಿದ್ದಾರೆ. ಆದಾಗ್ಯೂ ಗ್ರಾಹಕರು ಬಾಕಿ ಮೊತ್ತವನ್ನು ಕೋರಿ ಮೇಲ್ಮನವಿ ಸಲ್ಲಿಸಿರುತ್ತಾರೆ.
8. ಹಾಲಿ ಚಾಲ್ತಿಯಲ್ಲಿರುವ ವಿದ್ಯುತ್ ದರ ಪಟ್ಟಿಯಲ್ಲಿ Energes Charges at 10.60 paise/unit subject to weekly minimum of Rs. 210/- per KW of the sanctioned load ಎಂತಿದ್ದು, ಇದರಂತೆ ತಾತ್ಕಾಲಿಕ ಸ್ಥಾವರ ಸಂಖ್ಯೆ: KTL10918 ಇದಕ್ಕೆ ಬಿಲ್ಲು ಮಾಡಿರುತ್ತದೆ. ಸದರಿ ಸ್ಥಾವರದ ರಿಚಾರ್ಜ ರಸೀದಿಗಳನ್ನು ಗಮನಿಸಲಾಗಿ, ಗ್ರಾಹಕರು ಪ್ರತಿ ಸಾರಿಯೂ ಹೆಚ್ಚು ಯುನಿಟ್ ಬಳಸದಿರುವುದಕ್ಕೆ ವಾರದ ಕನಿಷ್ಠ ದರಕ್ಕೆ ಚಾಲ್ತಿಯಲ್ಲಿರುವ ವಿದ್ಯುತ್ ದರ ಪಟ್ಟಿಯನುಸಾರ ರಿಚಾರ್ಜ ಮಾಡುವ ಸಮಯದಲ್ಲಿ ಗ್ರಾಹಕರಿಗೆ ಮೊತ್ತವನ್ನು ಭರಿಸಿಲು ಬಿಲ್ಲುನ್ನು ನೀಡಿತ್ತಾ ಬಂದಿದ್ದಿರುತ್ತದೆ. ಇದರಂತೆ ಗ್ರಾಹಕರು ಮೊತ್ತವನ್ನು ಭರಿಸಿ ವಿದ್ಯುತ್ ಬಳಕೆಯನ್ನು ಮಾಡಿರುತ್ತಾರೆ. ಗ್ರಾಹಕರಿಗೆ ನೀಡಿರುವ ಬಿಲ್ಲಿನಲ್ಲಿ ಯಾವುದೇ ವಾರದಲ್ಲಿ ಬಳಸಿದ ಯೂನಿಟ್‌ಗಳನುಸಾರ ಬಿಲ್ ಆಗದೇ ಇರುವುದು ಕಂಡುಬಂದಿರುತ್ತದೆ. (M/s Supermax transaction report is enclosed)
9. M/s Supermax Supermax ರವರ Closing report ನಲ್ಲಿ Discounted units:100 ಹಾಗೂ ಇದರ ಮೊತ್ತ 1081.50 ಎಂದು ತೋರಿಸಿರುವುದನ್ನು ಹೆಚ್ಚುವರಿ ಕರೆನ್ಸಿ ಎಂದು ಭಾವಿಸಿ ಈ ಹೆಚ್ಚುವರಿ ಕರೆನ್ಸಿ ಮೊತ್ತ ರೂಪಾಯಿ 1190.43 ಅನ್ನು ಹಿಂದಿರುಗಿಸಲು ಕೋರಿರಬಹುದಾಗಿರುತ್ತದೆ. ಆದರೆ, ಇದರಲ್ಲಿ ಯಾವೊಂದು ಹೆಚ್ಚುವರಿ ಕರೆನ್ಸಿ ಮೊತ್ತವೆಂದು ಪರಿಗಣಿಸಿ ಹಿಂದಿರುಗಿಸಲು ನಿಯಮಾನುಸಾರ ಬರುವುದಿಲ್ಲವಾಗಿರುತ್ತದೆ.

ಆದ್ದರಿಂದ ದಯಾಪರರಾದ ತಾವು ಮೇಲಿನ ಎಲ್ಲ ಅಂಶಗಳನ್ನು ಪರಿಶೀಲಿಸಿ, ಅಂಶ-8ಅನ್ನು ಪರಿಗಣನಗೆ ತೆಗೆದುಕೊಂಡು ಹೆಸ್ಕಾಂ,ನಿಂದ ಶ್ರೀ ರಮೇಶ ಎಲ್ ಇರಕಲ್‌ರವರಿಗೆ ಹಿಂದಿರುಗಿಸುವ ಯಾವುದೇ ಮೊತ್ತ ಇಲ್ಲದಿರುವುದರ ಬಗ್ಗೆ ಸೂಕ್ತ ಆದೇಶವನ್ನು ನೀಡಬೇಕೆಂದು ಈ ಮೂಲಕ ವಿನಂತಿಸಲಾಗಿದೆ.

## ಪ್ರಕರಣದ ಸಾರಾಂಶದ ಮೇಲೆ ವೇದಿಕೆಯ ಅಭಿಪ್ರಾಯ:

ಸದರ ಪ್ರಕರಣದಲ್ಲಿ ಗ್ರಾಹಕರ ಹೇಳಿಕೆ ಹಾಗೂ ಹೆಸ್ಕಾಂ, ಅಧಿಕಾರಿಗಳ ಹೇಳಿಕೆ ಮತ್ತು ಕಡತದಲ್ಲಿಯ ಕಾಗದ ಪತ್ರಗಳನ್ನು ಪರಿಶೀಲಿಸಲಾಗಿ ಈ ಕೆಳಕಂಡ ಮಾಹಿತಿ ಕಂಡು ಬರುತ್ತದೆ.

1. ಶ್ರೀ ರಮೇಶ ಎಲ್ ಇರಕಲ್, ಇವರ ಸ್ಥಾವರ ಸಂಖ್ಯೆ: KTL10918 ನೇದ್ದ ಸ್ಥಾವರವು 2 ಕಿಲೋ ವ್ಯಾಟ್ ವಿದ್ಯುತ್ ಮಂಜೂರಾತಿಯೊಂದಿಗೆ ಎಲ್.ಟಿ-7ಎ ಜಕಾತಿಯಡಿಯಲ್ಲಿ ದಿನಾಂಕ:07-03-2017 ರಂದು ಸಂಪರ್ಕಿತಗೊಂಡಿರುತ್ತದೆ. ಸದರಿ ಸ್ಥಾವರಕ್ಕೆ ಮುಂಗಡ ಬಳಕೆ ಶುಲ್ಕ(ಎ.ಸಿ.ಸಿ) ಮೊತ್ತ ರೂ. 6770/-ಗಳನ್ನು ಪಾವತಿಸಿದ್ದಿರುತ್ತದೆ. ಸ್ಥಾವರವನ್ನು ದಿನಾಂಕ:27-02-2019 ರಂದು ವಿದ್ಯುತ್ ಸ್ಥಾವರವನ್ನು ಡಿಸ್‌ಮೆಂಟಲ್ ಮಾಡಲಾಗಿದ್ದು, ಸ್ಥಾವರದ ಮುಂಗಡ ಬಳಕೆ ಶುಲ್ಕ(ಎ.ಸಿ.ಸಿ) ಮೊತ್ತ ರೂ. 6425.43/-ಗಳನ್ನು ಹಿಂಪಾವತಿಸುವಂತೆ ದಿನಾಂಕ:26-03-2019 ರಂದು ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ(ವಿ), ಕಾ ಮತ್ತು ಪಾ ಶಹರ ಉಪ ವಿಭಾಗ-1, ಹೆಸ್ಕಾಂ, ಹುಬ್ಬಳ್ಳಿರವರಿಗೆ ಅರ್ಜಿ ಸಲ್ಲಿಸಿರುವುದು ಕಂಡು ಬರುತ್ತದೆ. ಕಾರ್ಯನಿರ್ವಾಹಕ ಇಂಜಿನೀಯರ(ವಿ) ಕಾ ಮತ್ತು ಪಾ ನಗರ ವಿಭಾಗ, ಹೆಸ್ಕಾಂ, ಹುಬ್ಬಳ್ಳಿರವರ ಪತ್ರ ಸಂಖ್ಯೆ:1004-06 ದಿನಾಂಕ:29-04-2019 ರಲ್ಲಿ ಮೊತ್ತ ರೂ. 5235/-ಗಳನ್ನು ಹಿಂಪಾವತಿಸಿರುವುದು ಕಂಡುಬರುತ್ತದೆ. ಆದರೆ ಉಳಿದ ವ್ಯಾತ್ಯಾಸದ

....5

ಮೊತ್ತ ಪಾವತಿ ಮಾಡಲು ವಿಳಂಬವಾದ ದಿನಗಳಿಗೆ KERC Conditions of Supply ಅನುಛೇದ 29.08 ರ ಅನ್ವಯ ದಿನಾಂಕ:12-03-2019 ರಿಂದ ಬ್ಯಾಂಕ್ ಬಡ್ಡಿದರದಲ್ಲಿ ಬಡ್ಡಿಯನ್ನು ಪಾವತಿಸಿಕೊಂಡುವಂತೆ ಗ್ರಾಹಕರ ಪರವಾಗಿ ಶ್ರೀ ತುಷಾರ ಎಂ ಬದ್ದಿರವರು ದಿನಾಂಕ:12-05-2020 ರಂದು ಗ್ರಾಹಕರ ಕುಂದು ಕೊರತೆ ನಿವಾರಣಾ ವೇದಿಕಗೆ ದೂರು ಸಲ್ಲಿಸಿರುವುದು ಕಂಡುಬರುತ್ತದೆ.

2. ಶ್ರೀ ರಮೇಶ ಎಲ್ ಇರಕಲ್, ಇವರ ಸ್ಥಾವರ ಸಂಖ್ಯೆ: KTL10918 ನೇದ್ದ ಸ್ಥಾವರಕ್ಕೆ ರೂ. 6770/- ಮುಂಗಡ ಬಳಕೆ ಶುಲ್ಕ(ಎಸಿಸಿ) ಭರಿಸಿಕೊಂಡು 2 ಕಿಲೋ ವ್ಯಾಟ್ ವಿದ್ಯುತ್ ಮಂಜೂರಾತಿಯೊಂದಿಗೆ ಎಲ್.ಟಿ-7ಎ ಜಕಾತಿಯಡಿಯಲ್ಲಿ ದಿನಾಂಕ:07-03-2017 ರಂದು ಸಂಪರ್ಕಿತಗೊಂಡಿರುತ್ತದೆ. ಸದರಿ ಸ್ಥಾವರನ್ನು ದಿ:27-02-2019 ರಂದು ಗ್ರಾಹಕರ ಕೋರಿಕೆ ಮೇರೆಗೆ ಅವರ ಸ್ಥಾವರದ ವಿದ್ಯುತ್ ನಿಲುಗಡೆಗೊಳಿಸಿ, ಡಿಸ್‌ಮೆಂಟಲ್ ಮಾಡಲಾಗಿದ್ದಿರುತ್ತದೆ. ಗ್ರಾಹಕರು ಎಸಿಸಿ ಮೊತ್ತ ಹಿಂದಿರುಗಿಸಲು ಸಲ್ಲಿಸಿದ ಅರ್ಜಿಯನುಸಾರ ಮೆ:ಸುಪರ್ ಮ್ಯಾಕ್ಸ ಪ್ರೈವೇಟ್ ನಿಯಮಿತ, ಬೆಂಗಳೂರು ಇವರು ನೀಡಿದ ಗ್ರಾಹಕರ ಖಾತೆಯ ವಿವರವನ್ನು ಪರಿಶೀಲಿಸಿ, ಮುಂಗಡ ಬಳಕೆ ಶುಲ್ಕ ರೂ. 6770/-ರಲ್ಲಿ ಗ್ರಾಹಕರಿಂದ ಬಾಕಿ ಇದ್ದ ರೂ. 1535/-ಗಳನ್ನು ಕಡಿತಗೊಳಿಸಿ ರೂ. 5235/-ನ್ನು ವಿಭಾಗೀಯ ಕಚೇರಿಯಿಂದ ದಿನಾಂಕ:29-07-2019 ರಲ್ಲಿ ಗ್ರಾಹಕರಿಗೆ ಚೆಕ್ ಮೂಲಕ ಹಿಂಪಾವತಿಸಲಾಗಿದ್ದಿರುತ್ತದೆ. M/s Supermax Supermax ರವರ Closing report ನಲ್ಲಿ Discounted units:100 ಹಾಗೂ ಇದರ ಮೊತ್ತ 1081.50 ಎಂದು ತೋರಿಸಿರುವುದನ್ನು ಹೆಚ್ಚುವರಿ ಕರೆನ್ಸಿ ಎಂದು ಭಾವಿಸಿ, ಈ ಹೆಚ್ಚುವರಿ ಕರೆನ್ಸಿ ಮೊತ್ತ ರೂಪಾಯಿ 1190.43 ಅನ್ನು ಹಿಂದಿರುಗಿಸಲು ಕೋರಿರಬಹುದಾಗಿರುತ್ತದೆ. ಆದರೆ, ಇದರಲ್ಲಿ ಯಾವೊಂದು ಹೆಚ್ಚುವರಿ ಕರೆನ್ಸಿ ಮೊತ್ತವೆಂದು ಪರಿಗಣಿಸಿ ಹಿಂದಿರುಗಿಸಲು ನಿಯಮಾನುಸಾರ ಬರುವುದಿಲ್ಲವೆಂದು ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ(ವಿ) ಕಾ . ಮತ್ತು ಪಾ ಶಹರ ಉಪ ವಿಭಾಗ-1, ಹೆಸ್ಕಾಂ, ಹುಬ್ಬಳ್ಳಿರವರು ಪತ್ರ ಸಂಖ್ಯೆ:5256-57 ದಿನಾಂಕ:21-09-2020 ರ ಪತ್ರದಲ್ಲಿ ವೇದಿಕೆಗೆ ವಿನಂತಿಸಿಕೊಂಡಿರುವುದು ಕಂಡು ಬರುತ್ತದೆ.

3. ಮುಂದುವರೆದು ದಿನಾಂಕ:25-09-2020 ರಲ್ಲಿ ಜರುಗಿದ ವಿಚಾರಣೆಯಂದು ಗ್ರಾಹಕರಿಗೆ ಹಿಂಪಾವತಿಸಿದ ಲೆಕ್ಕಾಚಾರದ ಪಟ್ಟಿಯನ್ನು ದಿನಾಂಕ:29-09-2020 ರೊಳಗಾಗಿ ವೇದಿಕೆಗೆ ಸಲ್ಲಿಸುವಂತೆ ಸೂಚಿಸಿದ್ದು, ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ(ವಿ), ಕಾ ಮತ್ತು ಪಾ ಶಹರ ಉಪ ವಿಭಾಗ-1, ಹೆಸ್ಕಾಂ, ಹುಬ್ಬಳ್ಳಿರವರ ಪತ್ರ ಸಂಖ್ಯೆ: 5324 ದಿನಾಂಕ:30-09-2020 ರ ಪತ್ರದೊಂದಿಗೆ ಗ್ರಾಹಕರಿಗೆ ಹಿಂಪಾವತಿಸಿದ ಲೆಕ್ಕಾಚಾರದ ಪಟ್ಟಿಯನ್ನು ಲೆಕ್ಕಾಧಿಕಾರಿ(ಆಂ.ಪ)ರವರಿಂದ ದೃಢೀಕರಿಸಿ ಸಲ್ಲಿಸಿರುತ್ತಾರೆ. ಸದರಿ ಲೆಕ್ಕಾಚಾರದ ಪಟ್ಟಿಯನ್ನು ಪರಿಶೀಲಿಸಲಾಗಿ ಗ್ರಾಹಕರ ಹಿಂಪಾವತಿಸಬೇಕಾದ ವ್ಯತ್ಯಾಸದ ಮೊತ್ತ ರೂ. 891/- ಇರುವುದು ಕಂಡುಬಂದಿರುತ್ತದೆ.

....6

ಮೇಲಿನ ಎಲ್ಲ ಅಂಶಗಳನ್ನು ಮತ್ತು ಪ್ರಕರಣಕ್ಕೆ ಸಂಬಧಪಟ್ಟ ದಾಖಲಾತಿಗಳನ್ನು ಪರಿಶೀಲಿಸಲಾಗಿ, ಗ್ರಾಹಕರಿಂದ ಪಾವತಿಸಕೊಂಡಿರುವ ಮುಂಗಡ ಬಳಕೆ ಶುಲ್ಕ(ಎಸಿಸಿ) ರೂ. 6770/-ಗಳಲ್ಲಿ ರೂ. 5235/-ನ್ನು ಸಂಬಂಧಿಸಿದ ವಿಭಾಗೀಯ ಕಚೇರಿಯಿಂದ ದಿನಾಂಕ:29-07-2019 ರಲ್ಲಿ ಚೆಕ್ ಮೂಲಕ ಗ್ರಾಹಕರಿಗೆ ಹಿಂಪಾವತಿಸಲಾಗಿದ್ದು, ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ(ವಿ), ಕಾ ಮತ್ತು ಪಾ ಶಹರ ಉಪ ವಿಭಾಗ-1, ಹೆಸ್ಕಾಂ, ಹುಬ್ಬಳ್ಳಿರವರು ವೇದಿಕೆಗೆ ಸಲ್ಲಿಸಿರುವ ಲೆಕ್ಕಾಚಾರದ ಪಟ್ಟಿಯನುಸಾರ ರೂ. 891/-ಗಳನ್ನು ಗ್ರಾಹಕರಿಗೆ ಹಿಂಪಾವತಿಸಬೇಕಾಗುತ್ತದೆ. ಆದ್ದರಿಂದ ಈ ಕೆಳಗಿನಂತೆ ಆದೇಶಿಸಲಾಗಿದೆ.

**ಆದೇಶ ಸಂಖ್ಯೆ:ಅಇಂ(ವಿ)/ಉಲೆನಿ/ಹಿಸ-1/ಗ್ರಾಕುಂಕೊನಿವೇ/ಕಡತ-252/2020/CYS-592 ದಿನಾಂಕ:30-09-2020**

ಗ್ರಾಹಕರ ಕುಂದು ಕೊರತೆ ನಿವಾರಣಾ ವೇದಿಕೆಗೆ ಆದೇಶ ಸಂಖ್ಯೆ ಹೆಸ್ಕಾಂ/ಜಿಎಂ(ಟಿ)/ಇಇ-4/ಎಓ/13-14/ಸಿವೈಎಸ್-769 ದಿ.16.07.2013 ರನ್ವಯ ಹಾಗೂ ಹೆಸ್ಕಾಂ/ಜಿಎಂ(ಟಿ)/ಇಇ-4/ಎಓ/19-20/ಸಿವೈಎಸ್-5493 ದಿ.12.03.2020 ರನ್ವಯ ದತ್ತವಾದ ಅಧಿಕಾರವನ್ನು ಚಲಾಯಿಸಿ ಈ ಕೆಳಗಿನಂತೆ ಆದೇಶಿಸಲಾಗಿದೆ.

1. ಗ್ರಾಹಕರ ಮನವಿಯನ್ನು ಭಾಹಶಃ ಪುರಸ್ಕರಿಸಲಾಗಿದೆ.
2. ಹಿಂಪಾವತಿಸಬೇಕಾಗಿರುವ ಮುಂಗಡ ಬಳಕೆ ಶುಲ್ಕ ರೂ. 891/-ಗಳನ್ನು ಸ.ಕಾ.ನಿ.ಇಂ(ವಿ), ಶಹರ ಉಪ ವಿಭಾಗ-1, ಹೆಸ್ಕಾಂ, ಹುಬ್ಬಳ್ಳಿರವರು ಗ್ರಾಹಕರಿಗೆ ಕೆ.ಇ.ಆರ್.ಸಿ. ಸಿ.ಓ.ಎಸ್. ನಿಯಮ 29.08 ರನ್ವಯ ನಿಯಮಾನುಸಾರ ಹಿಂಪಾವತಿಸುವ ಕ್ರಮ ಜರುಗಿಸುವುದು.

(ರಾಮಪ್ಪ ಎನ್ ಎನ್)
ಉಪಲೆಕ್ಕ ನಿಯಂತ್ರಣಾಧಿಕಾರಿ
ಹಾಗೂ ಗ್ರಾಕುಂಕೊನಿವೇ ಸದಸ್ಯರು
ಕಾ ಮತ್ತು ಪಾ ವೃತ್ತ, ಹುಬ್ಬಳ್ಳಿ

(ಎಮ್. ಆರ್. ಶಾನಭಾಗ)
ಅಧೀಕ್ಷಕ ಇಂಜಿನೀಯರ(ವಿ)
ಕಾ & ಪಾ ವೃತ್ತ, ಹೆಸ್ಕಾಂ, ಹುಬ್ಬಳ್ಳಿ
ಹಾಗೂ ಅಧ್ಯಕ್ಷರು, ಧಾರವಾಡ ಜಿಲ್ಲೆ
ಗ್ರಾ.ಕುಂ.ಕೊ.ನಿ.ವೇದಿಕೆ.

ಗೆ,

**"ನೊಂದಾಯಿತ ಅಂಚೆ ಮೂಲಕ"**

**ಶ್ರೀ ರಮೇಶ ಎಲ್ ಈರಕಲ್,**
(R R No :KTL-10918)
AC.ID:4544032091
C/o ಶ್ರೀ ತುಷಾರ ಎಂ ಬದ್ದಿ,
ಅರಿಹಂತ ಪಾರ್ಕ, ಕೇಶ್ವಾಪೂರ,
ಹುಬ್ಬಳ್ಳಿ-580023.

**ಪ್ರತಿ:**

1. ಮುಖ್ಯ ಇಂಜಿನೀಯರ(ವಿ), ಹುಬ್ಬಳ್ಳಿ ವಲಯ, ಹುವಿಸಕಂನಿ., ಕೇಶ್ವಾಪುರ, ಹುಬ್ಬಳ್ಳಿ-23 ಇವರ ದಯಾಪರ ಮಾಹಿತಿಗಾಗಿ.
2. ಪ್ರಧಾನ ವ್ಯವಸ್ಥಾಪಕರು(ತಾಂತ್ರಿಕ), ಕಂಪನಿ ಕಛೇರಿ, ಹುವಿಸಕಂನಿ, ಹುಬ್ಬಳ್ಳಿರವರ ಆದರ ಪೂರ್ವಕ ಮಾಹಿತಿಗಾಗಿ
3. ಕಾರ್ಯನಿರ್ವಾಹಕ ಇಂಜಿನೀಯರ(ವಿ), ಕಾ ಮತ್ತು ಪಾ ನಗರ ವಿಭಾಗ, ಹುವಿಸಕಂನಿ., ಹುಬ್ಬಳ್ಳಿ ಇವರಿಗೆ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.
4. ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ(ವಿ), ಕಾ ಮತ್ತು ಪಾ ಶಹರ ಉಪ ವಿಭಾಗ-1, ಹುವಿಸಕಂನಿ., ಹುಬ್ಬಳ್ಳಿರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.
5. ಮಹಾ ಕಡತ.